

# ಮತ್ಸ್ಯಾಹಾರಿ ಕಾಡುಬೆಕ್ಕು

ನಾಡಬೆಕ್ಕು ಗೊತ್ತು, ಕಾಡುಬೆಕ್ಕು ಬಲ್ಲಿರಾ? ಸುಲಭಕ್ಕೆ ನೋಡಲಿಕ್ಕೆ ಸಿಗದ ಕಾಡುಬೆಕ್ಕು ನಿಶಾಚರ ಪ್ರಾಣಿ. ಮೀನುಗಳನ್ನು ಕಬಳಿಸುವ ನಿಶಾಚರಿಯನ್ನು ಹುಡುಕಿಕೊಂಡು ಅಲೆದು, ಕೊನೆಗೂ ಬೆಳ್ಳಿಚುಕ್ಕಿಯಂತೆ ಎದುರಾದ ಕಾಡುಬೆಕ್ಕಿನ ಕುರಿತ ಕುತೂಹಲಕರ ಸಚಿತ್ರ ಕಥನ.

■ ಡಾ. ಟಿ. ಶಿವಾನಂದಪ್ಪ

ಭಾರತ ದೇಶ ವೈವಿಧ್ಯಮಯ ವನ್ಯ ಜೀವಿಗಳ ತವರು. ವಿಶಿಷ್ಟ ಕಾಡುಮೃಗಗಳಾದ ಹುಲಿ, ಸಿಂಹ, ಚಿರತೆ, ಕರಡಿ ನಮ್ಮ ದೇಶದ ವನ್ಯ ಸಂಪತ್ತಿನ ಶ್ರೀಮಂತಿಕೆಗೆ ಸಾಕ್ಷಿ. ಆದರೆ, ನಮ್ಮ ಕಾಡು ಪ್ರದೇಶಗಳಲ್ಲಿ ಸಾಮಾನ್ಯವಾಗಿ ಕಾಣದ ಅನೇಕ ವನ್ಯಜೀವಿಗಳ ಇರುವಿಕೆಯ ಬಗ್ಗೆ ಹೆಚ್ಚಿನ ಜನರಿಗೆ ತಿಳಿವಳಿಕೆ ಇಲ್ಲ. ಅಂಥದೊಂದು ವಿಶಿಷ್ಟ ವನ್ಯಜೀವಿ ಕಾಡುಬೆಕ್ಕು.

ಕಾಡುಬೆಕ್ಕುಗಳಲ್ಲಿ ‘ಮತ್ಸ್ಯಾಹಾರಿ ಕಾಡುಬೆಕ್ಕು’ ವಿಶಿಷ್ಟವಾದದ್ದು. ಇದು ನದಿ, ಸರೋವರ ಹಾಗೂ ನದಿ–ಸಮುದ್ರ ಸಂಗಮ ಪ್ರದೇಶದಲ್ಲಿ ವಿಶೇಷವಾಗಿ ವಾಸಿಸುತ್ತದೆ. ಪ್ರಮುಖವಾಗಿ ಪಶ್ಚಿಮ ಬಂಗಾಳದ ಸುಂದರ ಬನ ಹಾಗೂ ಒರಿಸ್ಸಾ ರಾಜ್ಯದ ಬಿಟ್ಟರ್‌ಕಾನಿಕ (Bittarkanika) ಪರಿಸರದಲ್ಲಿ ಈ ಕಾಡುಬೆಕ್ಕು ವಿಶೇಷವಾಗಿ ಕಾಣಬರುತ್ತದೆ.

ಪಶ್ಚಿಮ ಬಂಗಾಳ ಈ ಕಾಡುಬೆಕ್ಕನ್ನು ತನ್ನ ‘ರಾಜ್ಯ ಪ್ರಾಣಿ’ ಎಂದು ಘೋಷಿಸಿದೆ. ಈ ಕಾಡುಬೆಕ್ಕು ಮತ್ಸ್ಯಾಹಾರಿ ಮಾತ್ರವಲ್ಲ, ನಿಶಾಚರಿಯೂ ಹೌದು. ಕೆಲವೇ ಪ್ರದೇಶಗಳಿಗೆ ಸೀಮಿತವಾಗಿರುವುದರಿಂದ ಇದನ್ನು ನೋಡುವುದು ಕಷ್ಟ. ರಾತ್ರಿ ಹೊತ್ತು ಇದರ ಹುಡುಕಾಟ ನಡೆಸಬೇಕಾಗುವುದರಿಂದ ಪತ್ತೆ ಹಚ್ಚುವುದರ ಜೊತೆಗೆ, ಛಾಯಾಗ್ರಹಣ ಅತಿ ಕಷ್ಟದ ಕೆಲಸ.

ಮತ್ಸ್ಯಾಹಾರಿ ಬೆಕ್ಕನ್ನು ನೋಡಬೇಕೆನ್ನುವುದು ನನ್ನ ಬಹುದಿನದ ಬಯಕೆಯಾಗಿತ್ತು. ಕಳೆದ ಮೂರು ದಶಕಗಳಿಂದ ಭಾರತದ ಉದ್ದಗಲಕ್ಕೂ